Akashvani : Bengaluru

National Bulletin In Kannada

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

26.08.2025 1310hrs

*******

**ಮುಖ್ಯಾಂಶಗಳು**:

- ಗುಜರಾತ್‌ನಲ್ಲಿ ಭಾರತ ನಿರ್ಮಿತ ಎಲೆಕ್ಟ್ರಿಕ್ ವಾಹನಗಳಿಗೆ ಪ್ರಧಾನಿ ಹಸಿರು ನಿಶಾನೆ; ನೂರು ರಾಷ್ಟ್ರಗಳಿಗೆ ಸ್ಥಳೀಯ ಉತ್ಪಾದಿತ ಎಲೆಕ್ಟ್ರಿಕ್ ವಾಹನ ರಫ್ತು
- ಉಚ್ಚ ನ್ಯಾಯಾಲಯಗಳು ತೀರ್ಪುಗಳನ್ನು ನೀಡುವಲ್ಲಿ ಹೆಚ್ಚು ವಿಳಂಬ ಮಾಡುತ್ತಿರುವ ಬಗ್ಗೆ ಸುಪ್ರೀಂಕೋರ್ಟ್ ಕಳವಳ
- ಮಧ್ಯಪ್ರದೇಶದಲ್ಲಿ ಇಂದು ವಿನೂತನ ರಣ್ ಸಂವಾದ್ ಕಾರ್ಯಕ್ರಮಕ್ಕೆ ಜನರಲ್ ಅನಿಲ್ ಚೌಹಾಣ್ ಚಾಲನೆ
- ಇದುವರೆಗೆ ೮.೧೧ ಕೋಟಿ ಸದಸ್ಯರನ್ನು ಹೊಂದುವ ಮೂಲಕ ಅಟಲ್ ಪಿಂಚಣಿ ಯೋಜನೆ ಮಹತ್ವದ ಮೈಲಿಗಲ್ಲು
- ಏಷಿಯನ್ ಶೂಟಿಂಗ್ ಚಾಂಪಿಯನ್‌ಶಿಪ್; ೫೦ಂಕ್ಕೂ ಹೆಚ್ಚು ಪದಕಗಳೊಂದಿಗೆ ಭಾರತ, ಪದಕ ಪಟ್ಟಿಯಲ್ಲಿ ಮುಂಚೂಣಿ

**********

ಗುಜರಾತ್‌ನ ಅಹ್ಮದಾಬಾದ್‌ನ ಹನ್ಸಲ್ಪುರದಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ಸುಜುಕಿಯ ಮೊದಲ ಜಾಗತಿಕ ಕಾರ್ಯತಂತ್ರದ ಬ್ಯಾಟರಿ ಎಲೆಕ್ಟ್ರಿಕ್ ವಾಹನ 'ಇ ವಿಟಾರಾ' ದ ಉದ್ಘಾಟನೆ ನೆರವೇರಿಸಿ, ಅದರ ರಫ್ತಿಗೆ ಹಸಿರು ನಿಶಾನೆ ತೋರಿದರು. ಭಾರತದಲ್ಲಿ ತಯಾರಾಗುವ ಇ-ವಾಹನಗಳನ್ನು ಯುರೋಪ್, ಜಪಾನ್ ಸೇರಿದಂತೆ ೧೦೦ಕ್ಕೂ ಹೆಚ್ಚು ರಾಷ್ಟ್ರಗಳಿಗೆ ರಫ್ತು ಮಾಡಲಾಗುವುದು. ಇದರೊಂದಿಗೆ, ಭಾರತವು ಸುಜುಕಿ ಸಂಸ್ಥೆಯ ಎಲೆಕ್ಟ್ರಿಕ್ ವಾಹನಗಳ ಜಾಗತಿಕ ತಯಾರಿಕಾ ಕೇಂದ್ರವಾಗಿ ಹೊರಹೊಮ್ಮಲಿದೆ. ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಿದ್ದು, ೧೦೦ ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಎಲೆಕ್ಟ್ರಿಕ್ ಬ್ಯಾಟರಿ ವಾಹನಗಳ ರಫ್ತಿಗೆ ಹಸಿರು ನಿಶಾನೆ ತೋರಿದರು. ತೋಶಿಬಾ, ಡೆನ್ಸೊ ಮತ್ತು ಸುಜುಕಿ ಸಹಭಾಗಿತ್ವದ ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಉತ್ಪಾದನಾ ಘಟಕ ದೇಶೀಯ ಉತ್ಪಾದನೆ ಮತ್ತು ಶುದ್ಧ ಇಂಧನದಲ್ಲಿ ನಾವೀನ್ಯತೆಗೆ ಬಲ ನೀಡಲಿದೆ. ಆ ಮೂಲಕ ೮೦ ಪ್ರತಿಶತಕ್ಕಿಂತಲೂ ಹೆಚ್ಚಿನ ಬ್ಯಾಟರಿ ಮೌಲ್ಯ ಈಗ ಭಾರತದಲ್ಲೇ ಉತ್ಪಾದನೆಯಾಗಲಿದೆ.ಬಳಿಕ ಹಸಿರು ಸಂಚಾರ

ಉಪಕ್ರಮಗಳ ಉದ್ಘಾಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಇನ್ನು ಮುಂದೆ ಭಾರತದಲ್ಲಿ ತಯಾರಾಗುವ ವಿದ್ಯುತ್ ಚಾಲಿತ ವಾಹನಗಳನ್ನು ನೂರು ರಾಷ್ಟ್ರಗಳಿಗೆ ರಫ್ತು ಮಾಡಲಾಗುವುದು. ಹೈಬ್ರಿಡ್ ಬ್ಯಾಟರಿ ಎಲೆಕ್ಟ್ರೋಡ್‌ಗಳ ಸ್ಥಳೀಯ ಉತ್ಪಾದನೆಗೆ ಚಾಲನೆ ನೀಡಲಾಗಿದ್ದು, ಇಂದಿನ ಈ ಎಲ್ಲಾ ಕಾರ್ಯಕ್ರಮಗಳು ಭಾರತ ಮತ್ತು ಜಪಾನದ ಸ್ನೇಹ ಸಂಬಂಧಕ್ಕೆ ಹೊಸ ಆಯಾಮ ನೀಡಿದೆ ಎಂದು ತಿಳಿಸಿದರು.

***ಧ್ವನಿ ***ಪ್ರಧಾನಮಂತ್ರಿ

ಇದಕ್ಕೂ ಮುನ್ನ ಸಾಮಾಜಿಕ ಮಾಧ್ಯಮದಲ್ಲಿ ಸಂದೇಶ ಹಂಚಿಕೊಂಡಿದ್ದ ಪ್ರಧಾನಿ, ಸ್ವಾವಲಂಬನೆ ಎಡೆಗಿನ ಹಾಗೂ ಹಸಿರು ಸಂಚಾರ ಕೇಂದ್ರವಾಗುವ ಹಾದಿಯಲ್ಲಿ ಭಾರತಕ್ಕೆ ಇಂದು ವಿಶೇಷ ದಿನವಾಗಿದೆ. ಈ ಯೋಜನೆ ಭಾರತದ ಬ್ಯಾಟರಿ ಪರಿಸರ ವ್ಯವಸ್ಥೆಗೆ ಉತ್ತೇಜನ ನೀಡಲಿದೆ ಎಂದು ತಿಳಿಸಿದ್ದರು.

**********

ಉಚ್ಚ ನ್ಯಾಯಾಲಯಗಳು ತೀರ್ಪುಗಳನ್ನು ನೀಡುವಲ್ಲಿ ಹೆಚ್ಚು ವಿಳಂಬ ಮಾಡುತ್ತಿರುವ ಬಗ್ಗೆ ಸುಪ್ರೀಂಕೋರ್ಟ್ ಕಳವಳ ವ್ಯಕ್ತ ಪಡಿಸಿದೆ. ವಿಚಾರಣೆ ಮುಗಿದ ಬಳಿಕವೂ ತಿಂಗಳು ಗಟ್ಟಲೇ ತೀರ್ಪು ನೀಡದಿರುವುದು ಅರ್ಜಿದಾರರ ನ್ಯಾಯಾಂಗ ಪ್ರಕ್ರಿಯೆ ಮೇಲಿನ ವಿಶ್ವಾಸವನ್ನು ಕುಂದಿಸುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಎಚ್ಚರಿಸಿದೆ. ನ್ಯಾಯಾಮೂರ್ತಿಗಳಾದ ಸಂಜಯ್ ಕರುಳ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರ ಅವರಿದ್ದ ಪೀಠ, ವಿಚಾರಣೆ ಮುಗಿದ ೩ ತಿಂಗಳಲ್ಲಿ ತೀರ್ಪು ನೀಡದಿದ್ದರೆ ಆ ಪ್ರಕರಣವನ್ನು ಹೈಕೋರ್ಟ್ ನ ರಿಜಿಸ್ಟ್ರಾರ್ ಜನರಲ್ ಮುಖ್ಯ ನ್ಯಾಯಾಮೂರ್ತಿಗೆ ವರದಿ ಮಾಡಬೇಕೆಂದು ಸೂಚಿಸಿದೆ. ಬಳಿಕ ಮುಖ್ಯ ನ್ಯಾಯಾಮೂರ್ತಿಯವರು ಸಂಬಂಧಿತ ಪೀಠಕ್ಕೆ ೨ ವಾರಗಳಲ್ಲಿ ತೀರ್ಪು ನೀಡುವಂತೆ ಸೂಚಿಸಿದ್ದಾರೆ. ಅವಧಿಯ ನಂತರವೂ ತೀರ್ಪು ನೀಡದಿದ್ದರೆ ಮುಖ್ಯ ನ್ಯಾಯಾಮೂರ್ತಿ ಆ ಪ್ರಕರಣವನ್ನು ಬೇರೆ ಪೀಠಕ್ಕೆ ನೀಡಬೇಕು ಎಂದು ನಿರ್ದೇಶನ ನೀಡಲಾಗಿದೆ. ಪ್ರಕರಣಗಳ ತೀರ್ಪು ವಿಳಂಬ ಕುರಿತು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕರಣವನ್ನು ಎಲ್ಲಾ ಹೈಕೋರ್ಟ್‌ಗಳಿಗೆ ರವಾನಿಸಲು ಮತ್ತು ಕಡ್ಡಾಯವಾಗಿ ಪಾಲನೆ ಮಾಡಲು ಸುಪ್ರೀಂ ಕೋರ್ಟ್ ಆದೇಶಿಸಿದೆ.

**********

ಮಧ್ಯ ಪ್ರದೇಶದ ಡಾ.ಅಂಬೇಡ್ಕರ್ ನಗರದಲ್ಲಿರುವ ಆರ್ಮಿವಾರ್ ಕಾಲೇಜ್ ನಲ್ಲಿ ಮೂರು ಪಡೆಗಳ ಜಂಟಿ ಸಂವಾದ ಕಾರ್ಯಕ್ರಮ ರಣ್ - ಸಂವಾದ್ ೨೦೨೫ ಅನ್ನು ಸೇನಾಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಭಾರತದ್ದೇ ಆದ ಸುದರ್ಶನ್ ಚಕ್ರ ವ್ಯವಸ್ಥೆ ನಾಗರಿಕ ಮತ್ತು ರಾಷ್ಟ್ರೀಯ ಹಾಗೂ ಕಾರ್ಯ ತಂತ್ರದ ದೃಷ್ಟಿಯಲ್ಲಿ

ಪ್ರಮುಖ ತಾಣಗಳನ್ನು ರಕ್ಷಿಸುವ ಜೊತೆಗೆ ವಿದೇಶಿ ದಾಳಿಗೆ ಪ್ರತ್ಯುತ್ತರ ನೀಡುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದರು. ರಣ್ - ಸಂವಾದ್ ೨೦೨೫ ವಿನೂತನ ಕಾರ್ಯಕ್ರಮವಾಗಿದ್ದು ಪ್ರತಿ ವಿಷಯಾಧಾರಿತ ಅಧಿವೇಶನದಲ್ಲಿ ಅಧಿಕಾರಿಗಳು ತಮ್ಮ ಸ್ವಂತ ಅನುಭವ ಆಧಾರಿತ ಸಲಹೆಗಳನ್ನು ನೀಡಲಿದ್ದಾರೆ.

**********

ಅಟಲ್ ಪಿಂಚಣಿ ಯೋಜನೆ ಈ ತಿಂಗಳ ೨೧ರ ವೇಳೆಗೆ ೮.೧೧ ಕೋಟಿ ಸದಸ್ಯರನ್ನು ಹೊಂದುವ ಮೂಲಕ ಮಹತ್ವದ ಮೈಲಿಗಲ್ಲು ಸಾಧಿಸಿದೆ. ೨೦೨೪-೨೫ನೇ ಹಣಕಾಸು ವರ್ಷದಲ್ಲಿ ಇದುವರೆಗೆ ೧.೧೭ ಕೋಟಿಗೂ ಅಧಿಕ ಹೊಸ ಸದಸ್ಯರು ಯೋಜನೆಗೆ ಸೇರ್ಪಡೆಯಾಗಿದ್ದಾರೆ. ಈ ಯೋಜನೆ ಮಹಿಳೆಯರು ಹಾಗೂ ಯುವಜನರಲ್ಲಿ ಅತ್ಯಂತ ಜನಪ್ರಿಯವಾಗುತ್ತಿದೆ. ಈ ಹಣಕಾಸು ವರ್ಷದ ಹೊಸ ಸೇರ್ಪಡೆಗಳಲ್ಲಿ ಶೇಕಡ ೫೫ ರಷ್ಟು ಮಹಿಳೆಯರೇ ಆಗಿದ್ದಾರೆ ಎಂಬುದು ಗಮನಾರ್ಹ ವಿಷಯವಾಗಿದೆ.

**********

ದೆಹಲಿ ಆಸ್ಪತ್ರೆ ನಿರ್ಮಾಣ ಹಗರಣ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಜಾರಿನಿರ್ದೇಶನಾಲಯ - ಇಡಿ ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶಾದ್ಯಂತ ೧೩ ಸ್ಥಳಗಳಲ್ಲಿ ಶೋಧಕಾರ್ಯಾಚರಣೆ ಕೈಗೊಂಡಿದೆ. ಈ ವೇಳೆ ದೆಹಲಿ ಮಾಜಿ ಆರೋಗ್ಯ ಸಚಿವ ಸೌರಭ್ ಭಾರಾದ್ವಜ್ ಅವರ ನಿವಾಸದ ಮೇಲೆ ದಾಳಿ ನಡೆಸಲಾಗಿದೆ. ಆಮ್ ಆದ್ಮಿ ಪಕ್ಷದ ಆಡಳಿತಾವಧಿಯಲ್ಲಿ ಮಂಜೂರಾದ ಆಸ್ಪತ್ರೆ ನಿರ್ಮಾಣ ಯೋಜನೆಗಳಲ್ಲಿ ನಡೆದಿರುವ ಅಕ್ರಮಗಳ ಕುರಿತು ಇಡಿ ತನಿಖೆ ನಡೆಸಿದೆ. ಇದಕ್ಕೂ ಮುನ್ನ ದೆಹಲಿ ಪೊಲೀಸ್ ಇಲಾಖೆಯ ಭ್ರಷ್ಟಚಾರ ವಿರೋಧಿ ಶಾಖೆ, ಸೌರಭ್ ಭಾರದ್ವಾಜ್ ಹಾಗೂ ಕೆಲವು ಖಾಸಗಿ ಗುತ್ತಿಗೆದಾರರು ಮತ್ತು ಸರಕಾರಿ ಅಧಿಕಾರಿಗಳ ವಿರುದ್ಧ ಎಫ್ಐಆರ್ ದಾಖಲಿಸಿತು. ತನಿಖಾ ಪ್ರಕ್ರಿಯೆ ವೇಳೆ ಸಂಗ್ರಹಿಸಲಾದ ದಾಖಲೆಗಳು ಮತ್ತು ಎಫ್ಐಆರ್ ನಲ್ಲಿನ ಆರೋಪದ ಆಧಾರದ ಮೇಲೆ ಶೋಧ ಕಾರ್ಯಾಚರಣೆ ನಡೆಸಲಾಗಿದೆ.

**********

ಕೇವಲ ೨೧ ಸಾವಿರ ರೂಪಾಯಿ ಹೂಡಿಕೆ ಮಾಡಿ ತಿಂಗಳಿಗೆ ೧೨ ಲಕ್ಷ ರೂಪಾಯಿ ಲಾಭ ಗಳಿಸುವ ಕುರಿತಂತೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಹೇಳಿಕೆ ಎಂಬಂತೆ ಬಿಂಬಿಸುವ ವೀಡಿಯೋ, ಸತ್ಯಕ್ಕೆ ದೂರವಾಗಿದೆ ಎಂದು ಪಿಐಬಿ ಸತ್ಯ ಶೋಧನ ಘಟಕ ಸ್ಪಷ್ಟಪಡಿಸಿದೆ. ಈ ರೀತಿಯ ಯಾವುದೇ ಯೋಜನೆಯನ್ನು ಕೇಂದ್ರ ಹಣಕಾಸು ಸಚಿವರು ಅಥವಾ ಕೇಂದ್ರ ಸರ್ಕಾರ ಪ್ರಕಟಿಸಿಲ್ಲ ಎಂದು ಪಿಐಬಿ ಘಟಕ ತಿಳಿಸಿದ್ದು, ಜನರು ಇಂತಹ ತಪ್ಪು ಮಾಹಿತಿಗೆ ಬಲಿಯಾಗಬಾರದು ಯಾವುದೇ

ವಿಷಯವನ್ನು ನಂಬುವ ಅಥವಾ ಹಂಚಿಕೊಳ್ಳುವ ಮೊದಲು ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕೆಂದು ಮನವಿ ಮಾಡಿದೆ.

**********

ಉಕ್ರೇನ್ ಸ್ವತಂತ್ರ ದಿನೋತ್ಸವಕ್ಕೆ ಶುಭಾಶಯ ಕೋರಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಜಲೆನ್ಸ್ಕಿ ಧನ್ಯವಾದ ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಅವರು, ಶಾಂತಿ ಮತ್ತು ಸಂವಾದ ಕುರಿತ ಭಾರತದ ಬದ್ಧತೆಯ ಬಗ್ಗೆ ಶ್ಲಾಘನೆ ವ್ಯಕ್ತ ಪಡಿಸಿದ್ದಾರೆ.

**********

ಕಝುಕಿಸ್ತಾನದ ಶಿಮ್‌ಕೆಂಟ್ ನಲ್ಲಿ ನಡೆಯುತ್ತಿರುವ ೧೬ನೇ ಏಷೀಯನ್ ಶೂಟಿಂಗ್ ಚಾಂಪಿಯನ್‌ಶಿಪ್ ನಲ್ಲಿ ಭಾರತ ೫೦ ಪದಕಗಳ ಗಡಿ ದಾಟಿದ್ದು, ಪದಕ ಪಟ್ಟಿಯಲ್ಲಿ ಅಗ್ರ ಸ್ಥಾನ ಕಾಯ್ದುಕೊಂಡಿದೆ. ಮಹಿಳಾ ಟ್ರ್ಯಾಪ್ ಸ್ಫರ್ಧೆಯಲ್ಲಿ ನೀರು ಧಾಂಡ ಚಿನ್ನ ಗಳಿಸಿದರೆ, ಭಾರತದವರೇ ಆದ ಆಶಿಮ ಅಹ್ಲವತ್ ಕಂಚು ಪದಕ ಪಡೆದರು. ಇದೇ ವಿಭಾಗದ ತಂಡ ಸ್ಪರ್ಧೆಯಲ್ಲಿ ಕೂಡ ಭಾರತಕ್ಕೆ ಚಿನ್ನದ ಪದಕ ಲಭಿಸಿದೆ.ಮಹಿಳಾ ಜೂನಿಯರ್ ೨೫ ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ೩ ಪದಕಗಳನ್ನು ಭಾರತದವರೇ ಪಡೆದಿದ್ದು ವಿಶೇಷವಾಗಿತ್ತು. ಪಾಯಲ್ ಖತ್ರಿ ೩೬ ಅಂಕಗಳೊಂದಿಗೆ ಸ್ವರ್ಣ ಪದಕ ಪಡೆದರೆ, ನಾಮ್ಯ ಕಪೂರ್ ಬೆಳ್ಳಿ ಹಾಗೂ ತೇಜಸ್ವಿನಿ ಕಂಚು ಪದಕ ಗೆದ್ದಿದ್ದಾರೆ.ಪುರುಷರ ಟ್ರ್ಯಾಪ್ ಸ್ಪರ್ಧೆಯಲ್ಲಿ ಭಾರತದ ಭೌನೀಶ್ ಬೆಳ್ಳಿ ಪದಕ ಪಡೆದರು. ಮಹಿಳಾ ೨೫ ಮೀಟರ್ ಪಿಸ್ತೂಲ್ ಹಿರಿಯರ ವಿಭಾಗದಲ್ಲಿ ಮನು ಬಾಕರ್ ೪ನೇ ಸ್ಥಾನ ಪಡೆದರೆ, ಇಶಾ ಸಿಂಗ್ ೬ನೇ ಸ್ಥಾನ ಪಡೆದಿದ್ದಾರೆ. ಅವರಿಬ್ಬರು ಸಿಮ್ರನ್ ಪ್ರೀತ್‌ಕೌರ್ ಬ್ರಾರ್ ಜೊತೆಗೂಡಿ ತಂಡ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಪಂದ್ಯಾವಳಿಯಲ್ಲಿ ೩ ದಿನ ಬಾಕಿ ಉಳಿದಿದ್ದು, ಭಾರತ ಈವರೆಗೆ ೨೯ ಚಿನ್ನ, ೧೧ ಬೆಳ್ಳಿ ಹಾಗೂ ೧೪ ಕಂಚಿನ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ.

*****END*****